ಓ.ಎಸ್ಃ 11/2018
ಡಿ.ಡಬ್ಲ್ಯೂ ಃ 01
ಅರವಿಂದ ಇಂಗಳೇಶ್ವರ

**ದಿನಾಂಕಃ 21-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ವಾದಿ ಪರ ಶ್ರೀ ಎಸ್.ವ್ಹಿ.ಎ. ವಕೀಲರಿಂದಃ**

1. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇದೆ. ನಾನು ಅವಿಧ್ಯಾವಂತ. ದಾವಾ ಆಸ್ತಿಯ ಸರ್ವೆ ನಂ.80/2 ಅದರಲ್ಲಿ ನನ್ನ ಹೆಸರಿನಲ್ಲಿ ಕ್ಷೇತ್ರ 2 ಎಕರೆ 20 ಗುಂಟೆ ಜಮೀನು ಇದೆ. ನಾನು ದಾವಾ ಆಸ್ತಿಯನ್ನು ಪ್ರಾಪಂಚಿಕ ಅಡಚಣೆಗೊಸ್ಕರ ಮಾರಟಕ್ಕೆ ತೆಗೆದಿದ್ದೇನೆ ಎಂದರೆ ಸರಿಯಲ್ಲ. ಆಗ ವಾದಿಯು ಬಂದು ನನ್ನನ್ನು ಭೇಟಿ ಆಗಿದ್ದ ಎಂದರೆ ಸರಿ. ಆಗ ವಾದಿ ಮತ್ತು ನನ್ನ ನಡುವೆ 5 ಲಕ್ಷ ರೂಗಳಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಒಪ್ಪಂದವಾಯಿತು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ನಾನು ವಾದಿಯಿಂದ 4 ಲಕ್ಷ ರೂಗಳ ಹಣ ಪಡೆದಿದ್ದೆ ಅದನ್ನು ಮರು ಪಾವತಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ದಿಃ 26.09.2017 ರಂದು ವಾದಿಗೆ 4 ಲಕ್ಷ ರೂಗಳ ಹಣವನ್ನು ಮರು ಪಾವತಿ ಮಾಡಿದ್ದೇನೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಸಾಕ್ಷಿಗೆ ನಿಪಿ-1 ತೋರಿಸಲಾಯಿತು. ಅದನ್ನು ನೋಡಿ ಗುರುತುಹಿಡಿದು ನಾನು ವಾದಿಗೆ ನಿಪಿ-1 ರ ಪ್ರಕಾರ ಖರೀದಿ ಕರಾರು ಪತ್ರ ಮಾಡಿಕೊಟ್ಟಿದ್ದು ನಿಜ, ಆದರೆ ಹಣವನ್ನು ಮರುಪಾವತಿ ಮಾಡಿ ವಾಪಸ್ ಬಿಡಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನಾನು ವಾದಿಗೆ ನಿಪಿ-1 ರ ಪ್ರಕಾರ ಖರೀದಿ ಕರಾರು ಪತ್ರ ನೀಡಿದರು ಸಹ ಖರೀದಿ ಪತ್ರವನ್ನು ಮಾಡಿಕೊಡದೇ ತೊಂದರೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ದಿಃ 19.10.2017 ರಂದು ವಾದಿ ನನಗೆ ಖರೀದಿ ಪತ್ರ ಮಾಡಿಕೊಡುವಂತೆ ನೋಟಿಸು ನೀಡಿದ್ದರು ಎಂದರೆ ಸರಿಯಲ್ಲ.

3. ಸಾಕ್ಷಿಗೆ ನಿಪಿ-5 ನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಲು ಸಾಧ್ಯವಾಗಲ್ಲಿಲ್ಲಾ. ಏಕೆಂದರೆ ನನಗೆ ಕಣ್ಣಡಕದ ಅವಶ್ಯಕತೆ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ನೋಟಿಸು ತಲುಪಿದರು ಸಹ ನಾನು ಉತ್ತರ ನೀಡಲ್ಲಿಲ್ಲಾ ಎಂದರೆ ಸಾಕ್ಷಿದಾರರು ನನಗೆ ನೋಟಿಸೇ ಬಂದಿಲ್ಲ ಎಂದು ನುಡಿಯುತ್ತಾರೆ.

ಓ.ಎಸ್‌: 11/2018

ಡಿ.ಡಬ್ಲ್ಯೂ: 01

ಅರವಿಂದ ಇಂಗಳೇಶ್ವರ

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

(ತೇಜಸ್ವಿನಿ ಸೊಗಲದ)

ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು

ಬಸವನ ಬಾಗೇವಾಡಿ.